ದಿನಾಂಕ 22.09.2018 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀಸವಾಲುಃ- ಆರೋಪಿ 2 ರಿಂದ 4 ರವರ ಪರವಾಗಿ ಶ್ರೀ.ಆರ್.ಎಸ್. ವಕೀಲರವರಿಂದಃ**

14. ನಾನು ಮೊದಲು ಮಾದೇಗೌಡನ ದೊಡ್ಡಿಯ ನಿವಾಸಿ. ನನ್ನ ಮನೆಯಿಂದ ಪ್ರೇಮ ರವರ ಮನೆ ತುಂಬಾ ದೂರದಲ್ಲಿ ಇದೆ. ಪ್ರೇಮಳ ಮನೆಯಲ್ಲಿ ಕೂಗಿದರೆ ನನ್ನ ಮನೆಗೆ ಕೇಳಿಸುವುದಿಲ್ಲ ಎನ್ನುವುದು ನಿಜ. ನನಗೆ ಪ್ರೇಮಾಳ ಮನೆಯಲ್ಲಿ ಆಕೆ ಕೂಗಿಕೊಂಡ ದಿನಾಂಕ ನೆನಪಿಲ್ಲ. ಮುಖ್ಯರಸ್ತೆಯಿಂದ ಪ್ರೇಮಾಳ ಮನೆಗೆ 10 ಅಡಿ ದೂರ.

15. ಪ್ರೇಮಾಳ ಮನೆಯಲ್ಲಿ ಏನಾಯಿತು ಎಂದು ನನಗೆ ಯಾರೂ ತಿಳಿಸಿಲ್ಲ, ನಾನೇ ಕಣ್ಣಾರೆ ನೋಡಿದ್ದೇನೆ. ಆರೋಪಿಗಳನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯು ಮುಂದುವರಿದು ಅವರ ಮನೆಯಲ್ಲೂ ನೋಡಿದ್ದೇನೆ, ಆನಂತರ ತಹಶೀಲ್ದಾರರು ಕರೆಸಿದ್ದಾಗ ಜೈಲಿನಲ್ಲೂ ನೋಡಿದ್ದೇನೆ ಎಂದು ಸ್ವತಃ ಉತ್ತರಿಸಿದ್ದಾರೆ.

16. ನಾನು ಮತ್ತು ಪ್ರೇಮ ಜೈಲಿಗೆ ಜೊತೆಯಲ್ಲಿಯೇ ಹೋಗಿದ್ದೇವೆ. ಆನಂತರ ನನ್ನನ್ನು ಪೊಲೀಸರು ಜೈಲಿನ ಒಳಭಾಗಕ್ಕೆ ಆರೋಪಿಗಳ ಗುರುತು ಪತ್ತೆ ಬಗ್ಗೆ ಕರೆದುಕೊಂಡು ಹೋಗಿದ್ದಾರೆ. ಇವರೇ 3 ಜನ ಆರೋಪಿಗಳು ಎಂದು ಪೊಲೀಸರು ತಿಳಿಸಿದ್ದಾರೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಸುಮಾರು ಜನ ಆರೋಪಿಗಳನ್ನು ನಿಲ್ಲಿಸಿ ಇವರ ಪೈಕಿ ಪ್ರೇಮಾಳ ಮನೆಗೆ ಬಂದವರು ಯಾರು

ಎಂದು ಕೇಳಿದಾಗ ನಾನು 3 ಜನ ಆರೋಪಿಗಳನ್ನು ಗುರುತಿಸಿದ್ದೇನೆ ಎಂದು ಉತ್ತರಿಸಿದ್ದಾರೆ.

17. ಆ ರೀತಿ ಪ್ರೇಮಾಳ ಮನೆಗೆ ಬಂದ 3 ಜನ ಆರೋಪಿಗಳು ಯಾವ ಕಾರಿನಲ್ಲಿ ಹೊರಟು ಹೋಗಿದ್ದಾರೆ ಎಂಬುವುದು ನನಗೆ ಗೊತ್ತಿಲ್ಲ.

18. ನನಗೆ ಪ್ರೇಮ ಸುಮಾರು ವರ್ಷದಿಂದ ಪರಿಚಯ ಎನ್ನುವುದು ಸರಿ. ಆಕೆಯ ಗಂಡ ನನಗೆ ಗೊತ್ತು. ಪ್ರೇಮ ಮತ್ತು ಆಕೆಯ ಗಂಡನಿಗೆ ಸಹಾಯ ಮಾಡಬೇಕು ಎಂದು ನಾನು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ- ಆರೋಪಿ 1 ರವರ ಪರ ಶ್ರೀ.ಹೆಚ್.ಎಸ್.ಆರ್. ವಕೀಲರವರಿಂದಃ ಇರುವುದಿಲ್ಲ ಎಂದು ತೆಗೆದುಕೊಳ್ಳಲಾಗಿದೆ.**

**ಪಾಟೀಸವಾಲುಃ- ಆರೋಪಿ 5 ರಿಂದ 7 ರವರ ಪರ ವಕೀಲರವರಿಂದಃ ಇರುವುದಿಲ್ಲ ಎಂದು ತೆಗೆದುಕೊಳ್ಳಲಾಗಿದೆ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.